ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE: 11/9/2020

ಹಲವು ಏಳುಬೀಳುಗಳಿಗೆ ಸಾಕ್ಷಿಯಾದ ಪಾಲಿಕೆ | ಜಾಹೀರಾತು ಪ್ರದರ್ಶನ ನಿಷೇಧ | ಕಸದ ಸಮಸ್ಯೆಗಿಲ್ಲ ಪರಿಹಾರ

# ಅಂತ್ಯವಾಯ್ತು ಬಿಬಿಎಂಪಿ 2ನೇ ಆಡಳಿತಾವಧಿ

■ ಗಿರೀಶ್ ಗರಗ ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2ನೇ ಅವಧಿ ಗುರುವಾರ ಅಂತ್ಯವಾಗಿದೆ. ಹಲವು ರಾಜಕೀಯ ನಾಟಕಗಳ ನಡುವೆ ಆರಂಭವಾದ 5 ವರ್ಷದ ಆಡಳಿತಾವಧಿಯಲ್ಲಿ ಜಾಹೀರಾತು ಪ್ರದರ್ಶನ ನಿಷೇಧದಂತಹ ಕ್ರಮಗಳು, ಬಿಬಿಎಂಪಿ ಪುನಾರಚನೆ ವರದಿ ಪ್ರಕಟ, ಮೈತ್ರಿ ಆಡಳಿತದ ಅಂತ್ಯ... ಹೀಗೆ ಹಲವು ಪ್ರಮುಖ ಘಟನೆಗಳು ನಡೆದವು.

ಬಿಬಿಎಂಪಿ ಪುನಾರಚನೆಯ ಕೂಗಿನ ಬೆನ್ನಲ್ಲೇ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ಅತಿಹೆಚ್ಚು ವಾರ್ಡ್‌ಗಳಲ್ಲಿ ಗೆಲುವು ಸಾಧಿಸಿತ್ತು. ಆದರೆ, ಬೆಂಗಳೂರಿನ ಶಾಸಕರು, ವಿಧಾನಪರಿಷತ್ ಸದಸ್ಯರು ಹಾಗೂ ಬಿಬಿಎಂಪಿಯ ಪಕ್ಷೇತರ ಸದಸ್ಯರ ಬೆಂಬಲ ಪಡೆದು ಕಾಂಗ್ರೆಸ್ ಮತ್ತು ಜೆಡಿಎಸ್ ಗದ್ದುಗೆ ಪಡೆಯಿತು. ಕಸದ ಸಮಸ್ಯೆ, ರಸ್ತೆ ಗುಂಡಿಗಳು, ಅಕ್ರಮ ಜಾಹೀರಾತು ಹಾವಳಿ ಆಡಳಿತದ ಚುಕ್ಕಾಣಿ ಹಿಡಿದವರಿಗೆ ಸವಾಲಾಗಿದ್ದವು. 2015ರ ಸೆ.11ರಂದು ಕಾಂಗ್ರೆಸ್‌ನ ಮಂಜುನಾಥ ರೆಡ್ಡಿ ಮೇಯರ್ ಆಗಿ, ಜೆಡಿಎಸ್‌ನ ಹೇಮಲತಾ ಗೋಪಾಲಯ್ಯ ಉಪಮೇಯರ್ ಆಗಿ ಅಧಿಕಾರ ಸ್ವೀಕರಿಸಿದ್ದರು.

» **ಮೈತ್ರಿ ಆಡಳಿತ ಅಂತ್ಯ, ಬಿಜೆಪಿಗೆ ಅಧಿಕಾರ**

**ಸೂಪರ್‌ಸೀಡ್‌ಗಾಗಿ ಕಠಾರಿಯಾ ವರದಿ:** 2010 ರಿಂದ 2015ರವರೆಗಿನ ಬಿಜೆಪಿ ಆಡಳಿತದಲ್ಲಿ ನಡೆದ ಅಕ್ರಮ ಕುರಿತಂತೆ ವರದಿ ನೀಡಲು ಅಂದಿನ ಕಾಂಗ್ರೆಸ್ ಸರ್ಕಾರ ಐಎಎಸ್ ಅಧಿಕಾರಿ ರಾಜೇಂದರ್‌ಕುಮಾರ್ ಕಠಾರಿಯಾ ಅವರನ್ನು ನೇಮಿಸಿತ್ತು. ಸಮಗ್ರ ದಾಖಲೆ ಪರಿಶೀಲಿಸಿದ ಕಠಾರಿಯಾ, ಬಿಬಿಎಂಪಿಯ ಪ್ರತಿ ವಿಭಾಗದಲ್ಲೂ ಅಕ್ರಮ ನಡೆದಿಡೆ, ಅದರಿಂದಲೇ ಪಾಲಿಕೆಗೆ ಆರ್ಥಿಕ ನಷ್ಟವುಂಟಾಗಿದೆ ಎಂದು ವರದಿ ನೀಡಿದ್ದರು. ಅದನ್ನೇ ಮುಂದಿಟ್ಟುಕೊಂಡ ಸರ್ಕಾರ, ಬಿಬಿಎಂಪಿಯನ್ನು 2015ರ ಏಪ್ರಿಲ್ 17ರಂದು ಸೂಪರ್ ಸೀಡ್ ಮಾಡಿತ್ತು.

**ಹಲವು ಮಹತ್ವದ ಕ್ರಮಗಳು:** ಬಿಬಿಎಂಪಿ 2ನೇ ಅವಧಿಯ ಆಡಳಿತದಲ್ಲಿ ಹಲವು ಮಹತ್ವದ ಕ್ರಮಗಳನ್ನು ಕೈಗೊಳ್ಳಲಾಯಿತು. ಪ್ರಮುಖವಾಗಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಜಾಹೀರಾತು ಪ್ರದರ್ಶನ ನಿಷೇಧ, ತ್ಯಾಜ್ಯ ವಿಂಗಡಣೆ ಹೆಚ್ಚಳ, ಕಸ ಗುಡಿಸಲು ಯಾಂತ್ರಿಕ ವಾಹನ ಬಳಕೆ, ಡಂಪಿಂಗ್ ಯಾರ್ಡ್ ಬದಲು ತ್ಯಾಜ್ಯದಿಂದ ಗೊಬ್ಬರ ತಯಾರಿಕಾ ಘಟಕಗಳ ನಿರ್ಮಾಣ, ಸಿಗ್ನಲ್ ಫ್ರೀ ಕಾರಿಡಾರ್ ಕಾಮಗಾರಿಗೆ ಚಾಲನೆ, 100 ಕಿ.ಮೀ.ಗೂ ಹೆಚ್ಚಿನ ರಸ್ತೆಯಲ್ಲಿ ವೈಟ್‌ಟಾಪಿಂಗ್ ಹೀಗೆ ಹಲವು ಕ್ರಮಗಳನ್ನು ಕೈಗೊಳ್ಳಲಾಯಿತು. ಜತೆಗೆ 10 ವರ್ಷಗಳಿಂದ ಏರಿಕೆಯಾದ ಆಸ್ತಿ ತೆರಿಗೆ ಹೆಚ್ಚಿಸುವ ಮೂಲಕ ಆದಾಯ ವೃದ್ಧಿ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು.

## ಸರ್ಕಾರದ ನಿಯಂತ್ರಣ

ಹಿಂದಿನ ಅವಧಿಗಳಂತೆ ಈ ಅವಧಿಯಲ್ಲೂ ಸರ್ಕಾರದ ಹಿಡಿತದಲ್ಲೇ ಬಿಬಿಎಂಪಿ ಕೆಲಸ ಮಾಡುವಂತಾಯಿತು. ಕಾಂಗ್ರೆಸ್ ಸರ್ಕಾರವಿದ್ದಾಗ ಬಿಬಿಎಂಪಿಯಲ್ಲಿ ಯಾವುದೇ ಯೋಜನೆ ಅನುಷ್ಠಾನಕ್ಕೂ ಮುನ್ನ ಹೈಪವರ್ ಕಮಿಟಿ ಮೂಲಕ ಅನುಮತಿ ಪಡೆಯ ಬೇಕೆಂದು ಸೂಚಿಸಲಾಗಿತ್ತು. ಹೀಗಾಗಿ ಬಿಬಿಎಂಪಿ ಸ್ಥಾಯಿ ಸಮಿತಿ ಅಧಿಕಾರ ಮೊಟಕುಗೊಂಡು, ಸ್ವಂತಿಕೆಯಿಂದ ಯಾವುದೇ ಕ್ರಮ ಕೈಗೊಳ್ಳದಂತಾಗಿತ್ತು.



## ಭರವಸೆಯಾಗಿಯೇ ಉಳಿದವು

ಅನುಷ್ಠಾನಗೊಂಡಿದ್ದಕ್ಕಿಂತ ಐವರು ಮೇಯರ್‌ಗಳು ನೀಡಿದ್ದ ಭರವಸೆಗಳು ಈಡೇರದೆ ಹುಸಿಯಾದವು. ಪ್ರಮುಖವಾಗಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಅಕ್ರಮ ಒಎಫ್‌ಸಿ ಅಳವಡಿಕೆ, ಸಿಗ್ನಲ್ ಫ್ರೀ ಕಾರಿಡಾರ್ ಕಾಮಗಾರಿ ಪೂರ್ಣಗೊಳಿಸದೇ ಇದ್ದುದು, ತ್ಯಾಜ್ಯ ನಿರ್ವಹಣೆಯಲ್ಲಿ ವಿಫಲತೆ, ರಸ್ತೆ ಗುಂಡಿಗಳಿಗೆ ಮುಕ್ತಿ ನೀಡಲು ಸಾಧ್ಯವಾಗದಿದ್ದುದು ಹೀಗೆ ಹಲವು ಸಮಸ್ಯೆಗಳಿಗೆ ಪರಿಹಾರ ನೀಡದೆ ಮೇಯರ್‌ಗಳು ನಿರ್ಗಮಿಸಿದರು.

## ಸದಸ್ಯರ ಮರಣ

ಪ್ರಸಕ್ತ ಅವಧಿಯಲ್ಲಿ ಉಪಮೇಯರ್ ಆಗಿದ್ದ ರಮಿಳಾ ಉಮಾಶಂಕರ್ ನಿಧನರಾದರು. ಅವರ ನಂತರ ಭದ್ರೇಗೌಡರನ್ನು ಉಪಮೇಯರ್ ಆಗಿ ಆಯ್ಕೆ ಮಾಡಲಾಯಿತು. ಅದೇ ರೀತಿ ಸದಸ್ಯರಾದ ಮಹೇಶ್, ಏಳುಮಲೈ, ಮಹದೇವಮ್ಮ ನಿಧನರಾದರು.

## ಕೊನೇ ವರ್ಷ ಬಿಜೆಪಿಗೆ ಗದ್ದುಗೆ

ಬಿಬಿಎಂಪಿ 2ನೆ ಅವಧಿಯ ಮೊದಲ ಮೇಯರ್ ಮತ್ತು ಉಪಮೇಯರ್ ಆಗಿ ಕಾಂಗ್ರೆಸ್ ಮತ್ತು ಜೆಡಿಎಸ್ ಅಭ್ಯರ್ಥಿಗಳು ಆಯ್ಕೆಯಾಗಿದ್ದರು. ಕೊನೆಯ ಅವಧಿಯಲ್ಲಿ ಬಿಜೆಪಿ ಸದಸ್ಯರು ಮೇಯರ್ ಮತ್ತು ಉಪಮೇಯರ್ ಆದರು. ಬದಲಾದ ರಾಜಕೀಯ ಸನ್ನಿವೇಶದಿಂದ ಬೆಂಗಳೂರಿನ ಮೂವರು ಕಾಂಗ್ರೆಸ್ ಮತ್ತು ಒಬ್ಬ ಜೆಡಿಎಸ್ ಶಾಸಕರು ಬಿಜೆಪಿ ಸೇರಿದರು. ಅವರೊಂದಿಗೆ 15ಕ್ಕೂ ಹೆಚ್ಚಿನ ಬೆಂಬಲಿಗ ಬಿಬಿಎಂಪಿ ಸದಸ್ಯರು, ಪಕ್ಷೇತರ ಸದಸ್ಯರು ಬಿಜೆಪಿ ಸೇರ್ಪಡೆಯಾದರು. ಹೀಗಾಗಿ 2019ರ ಅಕ್ಟೋಬರ್‌ನಲ್ಲಿ 4 ವರ್ಷಗಳ ಮೈತ್ರಿ ಆಡಳಿತ ಕೊನೆಗೊಂಡು ಬಿಜೆಪಿ ಅಧಿಕಾರಕ್ಕೇರಿತು.

## 2015ರ ಚುನಾವಣೆ ವಿವರ

| | |
|---|---|
| 2015 ಆ. 22 | ಮತದಾನ |
| 2015 ಆ. 25 | ಫಲಿತಾಂಶ |
| 2015 ಸೆ.11 | ಮೊದಲ ಮೇಯರ್ ಮತ್ತು ಉಪಮೇಯರ್ ಆಯ್ಕೆ |

**ಪಾಲಿಕೆ ಹೊಂದಿದ್ದ ಪಕ್ಷಗಳ ಬಲಾಬಲ**

| | |
|---|---|
| ಬಿಜೆಪಿ | 100 |
| ಕಾಂಗ್ರೆಸ್ | 76 |
| ಜೆಡಿಎಸ್ | 14 |
| ಪಕ್ಷೇತರ | 8 |

## ಪಾಲಿಕೆಯ ಆಡಳಿತದ ಚುಕ್ಕಾಣಿ ಹಿಡಿದವರು

| ಅವಧಿ | ಮೇಯರ್ | ಉಪಮೇಯರ್ |
|---|---|---|
| 2015 ಸೆ. 11ರಿಂದ 2016 ಸೆ. 28 | ಮಂಜುನಾಥರೆಡ್ಡಿ | ಹೇಮಲತಾ ಗೋಪಾಲಯ್ಯ |
| 2016 ಸೆ. 28ರಿಂದ 2017 ಸೆ. 27 | ಜಿ. ಪದ್ಮಾವತಿ | ಎಂ. ಆನಂದ್ |
| 2017 ಸೆ. 28ರಿಂದ 2018 ಸೆ. 27 | ಆರ್. ಸಂಪತ್‌ರಾಜ್ | ಪದ್ಮಾವತಿ ನರಸಿಂಹಮೂರ್ತಿ |
| 2018 ಸೆ. 28ರಿಂದ 2019 ಸೆ. 30 | ಗಂಗಾಂಬಿಕೆ ಮಲ್ಲಿಕಾರ್ಜುನ್ | ರಮಿಳಾ ಉಮಾಶಂಕರ್ (ಭದ್ರೇಗೌಡ) |
| 2018 ಅ. 1ರಿಂದ 2020 ಸೆ. 11 | ಎಂ. ಗೌತಮ್‌ಕುಮಾರ್ | ರಾಮಮೋಹನ ರಾಜು |

## ಗೌರವ್ ಗುಪ್ತ ನೇಮಕ

ಬೆಂಗಳೂರು: ಬಿಬಿಎಂಪಿ ಕಾರ್ಪೋರೇಟರ್‌ಗಳ ಆಡಳಿತಾವಧಿ ಗುರುವಾರ ಅಂತ್ಯವಾಗಿರುವ ಹಿನ್ನೆಲೆಯಲ್ಲಿ ಆಡಳಿತಾಧಿಕಾರಿಯಾಗಿ ಹಿರಿಯ ಐಎಎಸ್ ಅಧಿಕಾರಿ ಗೌರವ್ ಗುಪ್ತ ಅವರನ್ನು ಸರ್ಕಾರ ನೇಮಿಸಿದೆ. ಹಾಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ಯಾಗಿರುವ ಗೌರವ್, ಬಿಬಿಎಂಪಿಗೆ ಸಮ ಪ್ರಭಾರ ಜವಾಬ್ದಾರಿ ವಹಿಸಿ ಕೊಂಡಿದ್ದಾರೆ. ಇವರು ಕರ್ನಾಟಕ ಕೇಡರ್‌ನ 1990ರ ಬ್ಯಾಚ್‌ನ ಅಧಿಕಾರಿಯಾಗಿದ್ದಾರೆ.



» **ಪಾಲಿಕೆಗೆ ಆಡಳಿತಾಧಿಕಾರಿ**

ಬಿಬಿಎಂಪಿಯಲ್ಲಿ 1967 ರಿಂದ 2015ರವರೆಗೆ ಒಟ್ಟು 26 ಆಡಳಿತಾಧಿಕಾರಿಗಳು ಕಾರ್ಯ ನಿರ್ವಹಿಸಿದ್ದಾರೆ. ಪ್ರಸ್ತುತ 27ನೇ ಆಡಳಿ ತಾಧಿಕಾರಿಯಾಗಿ ಗೌರವ್ ಗುಪ್ತ ನೇಮಕ ವಾಗಿದ್ದಾರೆ. 10ಕ್ಕೂ ಅಧಿಕ ಐಎಎಸ್ ಅಧಿಕಾರಿಗಳ ಹೆಸರು ಕೇಳಿಬಂದಿತ್ತು. ಆದರೆ, ಅಂತಿಮವಾಗಿ ಗೌರವ್ ಗುಪ್ತ ಅವರನ್ನು ನೇಮಕ ಮಾಡಲಾಗಿದೆ. ಶುಕ್ರವಾರ ಅವರು ಬಿಬಿಎಂಪಿ ಆಡಳಿತಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಲಿದ್ದಾರೆ.

## ಚುನಾವಣೆ ಮುಂದೂಡಲು ನೆಪ

ಬೆಂಗಳೂರು: ಬಿಬಿಎಂಪಿ ಚುನಾವಣೆ ನಡೆಸಲು ಯಾವುದೇ ಅಡ್ಡಿಯಿಲ್ಲ. ಈಗಾಗಲೇ ಕೇಂದ್ರ ಚುನಾವಣಾ ಆಯೋಗವೂ ತನ್ನ ನಿಲುವು ತಿಳಿಸಿದ್ದು, ಸಿದ್ಧತೆಗಳನ್ನೂ ಮಾಡಿಕೊಳ್ಳಲಾಗುತ್ತಿದೆ. ಆದರೆ ರಾಜ್ಯ ಸರ್ಕಾರ ಮಾತ್ರ ಚುನಾವಣೆಗೆ ಅಡ್ಡಗಾಲು ಹಾಕುತ್ತಿದೆ ಎಂದು ಕಾಂಗ್ರೆಸ್ ಟೀಕಿಸಿದೆ. ಬಿಬಿಎಂಪಿ ಚುನಾವಣೆ ನಡೆಸಲು ಮನಸ್ಸಿಲ್ಲದ ಸರ್ಕಾರ ವಾರ್ಡ್ ವಿಂಗಡಣೆ, ಮೀಸಲಾತಿ ಬದಲಾವಣೆ ನೆಪ ಹೇಳುತ್ತಿದೆ ಎಂದು ಕೆಪಿಸಿಸಿ ಮಾಧ್ಯಮ ಹಾಗೂ ಸಂವಹನ ವಿಭಾಗದ ಸಹ ಅಧ್ಯಕ್ಷ ವಿ.ಆರ್. ಸುದರ್ಶನ್ ಗುರುವಾರ ಸುದ್ದಿಗೋಷ್ಠಿಯಲ್ಲಿ ದೂರಿದರು. ಚುನಾವಣೆ ತಡ ಮಾಡಬಾರದೆಂದು ಸರ್ಕಾರಕ್ಕೆ ಹೈಕೋರ್ಟ್ ಛೀಮಾರಿ ಹಾಕಿದೆ. ಆದರೆ, ಸರ್ಕಾರ ಇಲ್ಲಸಲ್ಲದ ಕಾರಣ ಹೇಳಲು ಹೊರಟಿದೆ. ಆಡಳಿತಾಧಿಕಾರಿ ನೇಮಕ ಮಾಡಿಕೊಂಡು ಮನಸೋಇಚ್ಛೆ ತೊಡಗಿಸಿಕೊಳ್ಳಬಹುದು ಎಂಬ ಉದ್ದೇಶ ಹೊಂದಿದೆ ಎಂದು ಆಪಾದಿಸಿದರು.

» **ಸರ್ಕಾರದ ವಿರುದ್ಧ ಕಾಂಗ್ರೆಸ್ ವಾಗ್ದಾಳಿ**